**<u>2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ ಹಾಗೂ ವಿಶೇಷ ನ್ಯಾಯಾಲಯ ದಾವಣಗೆರೆ .</u>**

SC. No.165-2022

ದೋ.ಸಾ. 15
ಫ್ರಾ.ಸಾ. 3
ಪ್ರ.ವ.ಬೊ.ದಿನಾಂಕ. 13-08-2025

| | | |
|---|---|---|
| ಹೆಸರು ಶ್ರೀ/ ಶ್ರೀ ಮತಿ. | - | ಪ್ರಕಾಶ್ |
| ತಂದೆ / ಗಂಡನ ಹೆಸರು | - | ಕೃಷ್ಣ |
| ವಯಸ್ಸು | - | 57 |
| ಉದ್ಯೋಗ | - | ಮಾಲೀಕರು, ಶಿವರಾವ್ ಡಬೀರ್ ಅಂಡ್ ಕಂಪನಿ, ದಾವಣಗೆರೆ |
| ವಾಸ ಸ್ಥಳ | - | ದಾವಣಗೆರೆ |

ಮುಖ್ಯವಿಚಾರಣೆಃ - ಮಾನ್ಯ ಸರ್ಕಾರಿ ಅಭಿಯೋಜಕರಿಂದ

ನಾವು ನಡೆಸಿಕೊಂಡು ಬರುತ್ತಿರುವ ಶಿವರಾವ್ ಡಬೀರ್ ಅಂಡ್ ಕಂಪನಿಯು ದಾವಣಗೆರೆಯ ಪಿಬಿ ರಸ್ತೆಯಲ್ಲಿ ಇರುತ್ತದೆ. ಅದನ್ನು ನಾವು ಕಳೆದ 70 ವರ್ಷಗಳಿಂದ ನಮ್ಮ ಮನೆತನದವರು ನಡೆಸಿಕೊಂಡು ಬರುತ್ತಿದ್ದೇವೆ. ಸದರಿ ಕಂಪನಿಯಲ್ಲಿ ಸುಮಾರು 14 ಜನ ಕೆಲಸ ಮಾಡುತ್ತಿದ್ದಾರೆ. ನನಗೆ ಫ್ರಾ.ಸಾ.1 ರವರ ಪರಿಚಯ ಇದ್ದು, ಅವರು ನಮ್ಮ ಕಂಪನಿಯಲ್ಲಿ ಮೆಕಾನಿಕ್ ಆಗಿ ಕೆಲಸ ಮಾಡುತ್ತಿದ್ದರು. ಅಲ್ಲದೇ ನನಗೆ ಫ್ರಾ.ಸಾ.2 ರವರ ಪರಿಚಯ ಇದ್ದು, ಅವರು ನಮ್ಮ ಕಂಪನಿಯಲ್ಲಿ ಕಂಪ್ಯೂಟರ್ ಆಪರೇಟರ್ ಆಗಿ ಕೆಲಸ ಮಾಡುತ್ತಿದ್ದರು. ನಮ್ಮ ಕಂಪನಿಯಲ್ಲಿ ಕೆಲಸ ಮಾಡುತ್ತಿರುವ ಕೆಲಸಗಾರರು ಬೆಳಿಗ್ಗೆ 10-00 ಗಂಟೆಯಿಂದ ಮದ್ಯಾಹ್ನ 1-30 ಗಂಟೆಯವರೆಗೆ ಹಾಗೂ ಮದ್ಯಾಹ್ನ 3-00 ಗಂಟೆಯಿಂದ 7-00 ಗಂಟೆಯವರೆಗೆ ಕೆಲಸ ಮಾಡುತ್ತಾರೆ. ಮದ್ಯಾಹ್ನ 1-30 ಗಂಟೆಗೆ ಕೆಲಸಗಾರರು ಊಟಕ್ಕೆ ಹೋಗಿ 3-00 ಗಂಟೆಗೆ ವಾಪಾಸು ಬರುತ್ತಾರೆ.

ನಮ್ಮ ಕಂಪನಿಯಲ್ಲಿ ಕೆಲಸ ಮಾಡುತ್ತಿದ್ದ ಸಮಯದಲ್ಲಿ ಫ್ರಾ.ಸಾ.1 ರವರು ಮದ್ಯಾಹ್ನದ ಊಟಕ್ಕೆ ಮನೆಗೆ ಹೋಗುತ್ತಿದ್ದರು. ಅಂದಾಜು ಅಂದರೆ ದಿಃ 16-10-2020 ರಂದು ಫ್ರಾ.ಸಾ.1 ರವರು ಮದ್ಯಾಹ್ನ ಊಟಕ್ಕೆ ಮನೆಗೆ ಹೋಗುತ್ತಿರುವಾಗ ತ್ರಿಶೂಲ್ ಟಾಕೀಸಿನ ಬಳಿ ಆತನ ಮೇಲೆ ಪ್ರೀತಿಯ ವಿಚಾರಕ್ಕೆ ಸಂಬಂಧಿಸಿ ಹಲ್ಲೆಯಾಗಿರುತ್ತದೆ ಎಂದು ನನಗೆ ತಿಳಿದುಬಂದಿರುತ್ತದೆ. ಪ್ರೀತಿಯ ವಿಚಾರಕ್ಕೆ ಅಂದರೆ ಯಾರು ಯಾರನ್ನು ಪ್ರೀತಿಸುತ್ತಿದ್ದರು ಎನ್ನುವ ವಿಚಾರ ನನಗೆ ತಿಳಿದಿರುವುದಿಲ್ಲ. ಆ ರೀತಿ ಹಲ್ಲೆಯಾಗಿದೆ ಎಂಬ ಮಾಹಿತಿ ತಿಳಿದುಬಂದ ಬಳಿಕ ನಾನು ಫ್ರಾ.ಸಾ.1 ರವರನ್ನು ನೋಡಲು ಹೋಗಿದ್ದು ಇರುವುದಿಲ್ಲ. ಅಲ್ಲದೇ ಅವರಿಗೆ ಯಾರು ಹಲ್ಲೆ ಮಾಡಿದ್ದಾರೆ ಎಂದು ಮತ್ತು ಫ್ರಾ.ಸಾ.1 ರವರಿಗೆ ಎಲ್ಲಿ ಗಾಯವಾಗಿತ್ತು ಎಂದು ನನಗೆ ತಿಳಿದಿರುವುದಿಲ್ಲ. ಅದೇ ರೀತಿ ಯಾರ ವಿಚಾರಕ್ಕೆ ಸಂಬಂಧಿಸಿ ಫ್ರಾ.ಸಾ.1 ರವರಿಗೆ ಹಲ್ಲೆಯಾಗಿದೆ ಎಂದು ನನಗೆ ತಿಳಿದಿರುವುದಿಲ್ಲ.

ನನಗೆ ಫ್ರಾ.ಸಾ.1 ಮತ್ತು 2 ರವರು ನಮ್ಮ ಕಂಪನಿಯಲ್ಲಿ ಕೆಲಸ ಮಾಡುತ್ತಿರುವಾಗ ಅವರ ನಡುವೆ ಯಾವ ರೀತಿಯ ಸಂಬಂಧ ಇತ್ತು ಎಂದು ನನಗೆ ತಿಳಿದಿರುವುದಿಲ್ಲ. ಈ ಪ್ರಕರಣದಲ್ಲಿ ಪೋಲೀಸರು ನನ್ನನ್ನು ವಿಚಾರಿಸಿರುವುದಿಲ್ಲ. ಫ್ರಾ.ಸಾ.1 ರವರು ನಮ್ಮ ಕಂಪನಿಯಲ್ಲಿ ಕೆಲಸ ಮಾಡುವಾಗ ಮೆಕಾನಿಕ್ ಗೆ ಕೆಲಸ ಮಾಡಲು

ಕೊಟ್ಟಿದ್ದ ಬಟ್ಟೆಗಳನ್ನು ಹಾಕುತ್ತಿದ್ದು, ನಾನು ಅವುಗಳನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಗೆ ಈಗ ಮು.ಮಾ.1 ಮತ್ತು 3 ನ್ನು ತೋರಿಸಲಾಗಿದ್ದು, ಸಾಕ್ಷಿಯು ಅವುಗಳನ್ನು ನೋಡಿ ಗುರುತಿಸಿರುತ್ತಾರೆ.

( ಈ ಹಂತದಲ್ಲಿ ಮಾನ್ಯ ಅಭಿಯೋಜಕರು ಈ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯಾಗಿ ಪರಿಗಣಿಸಲು ಅನುಮತಿ ಕೋರಿದ್ದು, ಅನುಮತಿ ನೀಡಲಾಯಿತು.)

ಪಾಟೀಸವಾಲುಃ ಮಾನ್ಯ ಸರ್ಕಾರಿ ಅಭಿಯೋಜಕರಿಂದ.

ನಮ್ಮ ಕಂಪನಿಯಲ್ಲಿ ಫ್ರಾ.ಸಾ.1 ಮತ್ತು 2 ರವರು ಕೆಲಸ ಮಾಡುತ್ತಿರುವಾಗ ಅವರಿಬ್ಬರು ಒಬ್ಬರಿಗೊಬ್ಬರು ಪ್ರೀತಿಸುತ್ತಿದ್ದರು ಎನ್ನುವ ವಿಚಾರ ನನಗೆ ತಿಳಿದಿತ್ತು ಎಂದರೆ ಸರಿಯಲ್ಲ. ನಮ್ಮ ಕಂಪನಿಯಲ್ಲಿ ಫ್ರಾ.ಸಾ.2 ರವರು ಕೆಲಸ ಮಾಡುವಾಗ ಫ್ರಾ.ಸಾ.1 ರವರಿಗೆ ಹಲ್ಲೆಯಾಗಿದೆ ಎಂದು ತಿಳಿದುಬಂದ ಬಳಿಕ ಆಕೆಯು ನನ್ನಲ್ಲಿ ನನ್ನನ್ನು ಈ ಮೊದಲು 1 ನೇ ಆರೋಪಿಯು ಪ್ರೀತಿಸುತ್ತಿದ್ದು, ನಂತರ ಆತ ಕುಡಿದು ಬಂದು ನನ್ನ ಮೇಲೆ ಅನುಮಾನ ಮಾಡುತ್ತಿದ್ದ ಕಾರಣ ಮತ್ತು ನನ್ನ ಜೊತೆ ಗಲಾಟೆ ಮಾಡುತ್ತಿದ್ದ ಕಾರಣ ನಾನು ಆತನಿಂದ ದೂರವಾಗಿದ್ದೆ ಎಂಬ ವಿಚಾರ ನನ್ನ ಬಳಿ ತಿಳಿಸಿರುತ್ತಾಳೆ ಎಂದರೆ ಸರಿಯಲ್ಲ. ನಂತರ ಫ್ರಾ.ಸಾ.2 ರವರು ನನ್ನ ಬಳಿ ತದನಂತರ ತಾನು ಫ್ರಾ.ಸಾ.1 ರವರನ್ನು ಪ್ರೀತಿಸುತ್ತಿದ್ದು, ಈ ವಿಚಾರವನ್ನು ತಿಳಿದ 1 ನೇ ಆರೋಪಿಯು ಫ್ರಾ.ಸಾ.1 ರವರಿಗೆ ಕೊಲೆ ಮಾಡುತ್ತೇನೆ ಎಂದು ಧಮಕಿ ಹಾಕುತ್ತಿದ್ದ ಎಂಬ ವಿಚಾರವನ್ನು ನನ್ನ ಬಳಿ ತಿಳಿಸಿರುತ್ತಾಳೆ ಎಂದರೆ ಸರಿಯಲ್ಲ. ನಂತರ ಫ್ರಾ.ಸಾ.2 ರವರು ನನ್ನ ಬಳಿ ಸದರಿ ದಿನ 16-10-2020 ರಂದು ಆರೋಪಿತರಿಬ್ಬರು ಸೇರಿಕೊಂಡು ಕೊಲೆ ಮಾಡುವ ಉದ್ದೇಶದಿಂದಲೇ ಫ್ರಾ.ಸಾ.1 ರವರಿಗೆ ಚಾಕುವಿನಿಂದ ತಿವಿದಿದ್ದಾರೆ ಎಂದು ಹೇಳಿದ್ದಳು ಎಂದರೆ ಸರಿಯಲ್ಲ. ನಂತರ ನಾನು ಪೋಲೀಸರ ವಿಚಾರಣೆಯ ಸಮಯದಲ್ಲಿ ಈಗ ಓದಿ ಹೇಳಿದಂತೆ ಪೋಲೀಸರಿಗೆ ನನ್ನ ಹೇಳಿಕೆಯನ್ನು ಕೂಡ ನೀಡಿರುತ್ತೇನೆ ಎಂದರೆ ಸರಿಯಲ್ಲ. ಸದರಿ ಹೇಳಿಕೆಯ ಭಾಗವನ್ನು ನಿ.ಪಿ.5 ಎಂದು ಗುರುತಿಸಲಾಯಿತು. ಈ ಎಲ್ಲಾ ವಿಚಾರಗಳು ನನಗೆ ತಿಳಿದಿದ್ದರೂ ಕೂಡ ಈಗ ತಿಳಿದಿಲ್ಲ ಎಂದು ಸುಳ್ಳು ಸಾಕ್ಷಿಯನ್ನು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀಸವಾಲುಃ ಆರೋಪಿತರ ಪರ ವಕೀಲರಿಂದ.**

ನನಗೆ ಫ್ರಾ.ಸಾ.1 ರವರ ಮೇಲೆ ತ್ರಿಶೂಲ್ ಟಾಕೀಸಿನ ಬಳಿ ಹಲ್ಲೆ ಮಾಡಿದ್ದಾರೆ ಎನ್ನುವ ವಿಚಾರ ತಿಳಿದುಬಂದಿದೆ ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಮು.ಮಾ.1 ಮತ್ತು 3 ನಮ್ಮ ಕಂಪನಿಯ ಬಟ್ಟೆಗಳು ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆಃ- ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ . ಹೇ. ಕೇ. ಸರಿಯಾಗಿದೆ.

PRAVEEN KUMAR RAGHAV NAIK
Digitally signed by PRAVEEN KUMAR RAGHAV NAIK
Date: 2025.08.14 11:15:11 +0530

2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ದಾವಣಗೆರೆ.

2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ ಹಾಗೂ ವಿಶೇಷ ನ್ಯಾಯಾಲಯ ದಾವಣಗೆರೆ .

SC. No.165-2022

ದೋ.ಸಾ. 14
ಫ್ರಾ.ಸಾ. 2
ಪ್ರ.ವ.ಬೊ.ದಿನಾಂಕ. 13-08-2025

| | | |
|---|---|---|
| ಹೆಸರು ಶ್ರೀ/ ಶ್ರೀ ಮತಿ. | - | ಜಯಶ್ರೀ |
| ತಂದೆ / ಗಂಡನ ಹೆಸರು | - | ಈರಪ್ಪ |
| ವಯಸ್ಸು | - | 28 |
| ಉದ್ಯೋಗ | - | ಖಾಸಗಿ ಉದ್ಯೋಗ |
| ವಾಸ ಸ್ಥಳ | - | ದಾವಣಗೆರೆ |

ಮುಖ್ಯವಿಚಾರಣೆಃ - ಮಾನ್ಯ ಸರ್ಕಾರಿ ಅಭಿಯೋಜಕರಿಂದ

ನಾನು ಶಿವರಾವ್ ಡಬೀರ್ ಅಂಡ್ ಕಂಪನಿಯಲ್ಲಿ 2022 ರವರೆಗೆ ಅಕೌಂಟೆಂಟ್ ಆಗಿ ಕೆಲಸ ಮಾಡಿರುತ್ತೇನೆ. ನನಗೆ ಫ್ರಾ.ಸಾ.1 ರವರ ಪರಿಚಯ ಇರುತ್ತದೆ. ಸದರಿಯವರು ನಾನು ಮೇಲೆ ಹೇಳಿದ ಕಂಪನಿಯಲ್ಲಿ ಮೆಕಾನಿಕ್ ಆಗಿ ಕೆಲಸ ಮಾಡುತ್ತಿದ್ದರು. ಚಾ.ಸಾ.15 ಸದರಿ ಕಂಪನಿಯ ಮಾಲೀಕರಾಗಿರುತ್ತಾರೆ. ನ್ಯಾಯಾಲಯದ ಮುಂದೆ ಇರುವ 1 ನೇ ಆರೋಪಿಯು ನನ್ನ ಅಕ್ಕನ ಗಂಡನ ತಮ್ಮ. 2 ನೇ ಆರೋಪಿಯು 1 ನೇ ಆರೋಪಿಯ ಗೆಳೆಯನಾಗಿದ್ದು, ನನಗೆ ಪರಿಚಯ ಇರುವುದಿಲ್ಲ. ನನ್ನ ಅಕ್ಕನ ಮದುವೆಯಾಗಿ ಕಳೆದ 13-14 ವರ್ಷಗಳಾಗಿರುತ್ತದೆ.

1 ನೇ ಆರೋಪಿಯು ಮೊದಲು ನನ್ನ ಜೊತೆ ಚೆನ್ನಾಗಿ ಇದ್ದು, ಆ ಸಮಯದಲ್ಲಿ ನಾವಿಬ್ಬರು ಮದುವೆಯಾಗಬೇಕು ಎಂದು ಬಯಸಿದ್ದು, ತದನಂತರ ಆತ ನನ್ನ ಮೇಲೆ ಅನುಮಾನ ಮಾಡುವುದನ್ನು ಮಾಡುತ್ತಿದ್ದ. ಅಲ್ಲದೇ ಆತ ಕುಡಿದು ಬಂದು ನನ್ನ ಜೊತೆ ನಾನು ಕೆಲಸ ಮಾಡುವ ಸ್ಥಳದಲ್ಲಿಯೂ ಬಂದು ಗಲಾಟೆ ಮಾಡುತ್ತಿದ್ದ. 1 ನೇ ಆರೋಪಿಯು ಈ ರೀತಿ ಮಾಡುತ್ತಿದ್ದ ಕಾರಣ ನಂತರ ನಾನು ಆತನನ್ನು ಮದುವೆಯಾಗಲು ನಿರಾಕರಣೆ ಮಾಡಿರುತ್ತೇನೆ. ನಂತರ 1 ನೇ ಆರೋಪಿಯು ತೊಂದರೆ ನೀಡುತ್ತಿದ್ದರಿಂದ ಆತನಿಂದ ಸಂಬಂಧ ಕಡಿದುಕೊಂಡು ಸುಮಾರು ಎರಡು ವರ್ಷಗಳ ಬಳಿಕ ನಾನು ಫ್ರಾ.ಸಾ.1 ರವರನ್ನು ಪ್ರೀತಿಸಲು ಆರಂಭಿಸಿರುತ್ತೇನೆ. ನಾನು ಆ ರೀತಿಯಾಗಿ ಫ್ರಾ.ಸಾ.1 ರವರನ್ನು ಪ್ರೀತಿಸಲು ಆರಂಭಿಸಿದ ಬಳಿಕ 1 ನೇ ಆರೋಪಿಯು ಫ್ರಾ.ಸಾ.1 ರವರಿಗೆ ಧಮಕಿ ಹಾಕಲು ಆರಂಭಿಸಿರುತ್ತಾನೆ. ಧಮಕಿ ಅಂದರೆ 1 ನೇ ಆರೋಪಿಯು ಫ್ರಾ.ಸಾ.1 ರವರಿಗೆ ನನ್ನನ್ನು ಬಿಟ್ಟು ಬಿಡುವಂತೆ ಇಲ್ಲವಾದರೆ ಸಾಯಿಸಿಬಿಡುತ್ತೇನೆ ಎಂದು ಹೇಳಿರುತ್ತಾನೆ. ಈ ವಿಚಾರವನ್ನು ನನಗೆ ಫ್ರಾ.ಸಾ.1 ರವರು ತಿಳಿಸಿರುತ್ತಾರೆ. ಆ ರೀತಿಯಾಗಿ 1 ನೇ ಆರೋಪಿಯು ಮೂರು ನಾಲ್ಕು ಬಾರಿ ಫ್ರಾ.ಸಾ.1 ರವರಿಗೆ ಧಮಕಿ ಹಾಕಿದ್ದು, ಅಲ್ಲದೇ ನಾವು ಕೆಲಸ ಮಾಡುತ್ತಿದ್ದ ಕಂಪನಿಯ ಬಳಿ ಬಂದು ಧಮಕಿ ಹಾಕಿರುತ್ತಾನೆ.

ಸದರಿ ಮೇಲೆ ಹೇಳಿದ ಕಂಪನಿಗೆ ನಾನು ಬೆಳಿಗ್ಗೆ 10-00 ಗಂಟೆಗೆ ಕೆಲಸಕ್ಕೆ ಹೋಗಿ ಸಂಜೆ 6-30 ಗಂಟೆಗೆ ವಾಪಾಸು ಬರುತ್ತಿದ್ದೆ. ಫ್ರಾ.ಸಾ.1 ರವರು ಬೆಳಿಗ್ಗೆ 9-30 ಗಂಟೆಗೆ ಕೆಲಸಕ್ಕೆ ಬಂದು ಸಂಜೆ 7-30 ಗಂಟೆಗೆ ವಾಪಾಸು ಹೋಗುತ್ತಿದ್ದರು. ಮದ್ಯಾಹ್ನದ ಊಟವನ್ನು ನಾನು ಕಂಪನಿಯಲ್ಲಿಯೇ ಮಾಡುತ್ತಿದ್ದು, ಫ್ರಾ.ಸಾ.1 ರವರು ಮನೆಗೆ ಹೋಗಿ ಬಂದು ಮಾಡುತ್ತಿದ್ದರು.

ದಿಃ 16-10-2020 ರಂದು ಮಧ್ಯಾಹ್ನ 2-05 ರ ಸಮಯದಲ್ಲಿ ನನಗೆ ಫ್ರಾ.ಸಾ.1 ರವರು ದೂರವಾಣಿ ಮಾಡಿ ತನಗೆ ಹಲ್ಲೆಯಾಗಿದೆ ಎಂದು ತಿಳಿಸಿರುತ್ತಾರೆ. ಆ ದಿನ ಫ್ರಾ.ಸಾ.1 ರವರು ಕಂಪನಿಗೆ ಬಂದು ಮಧ್ಯಾಹ್ನ ಊಟಕ್ಕೆ ಮನೆಗೆ ಹೋಗಿದ್ದರು. ಫ್ರಾ.ಸಾ.1 ರವರು ಕಂಪನಿಯಲ್ಲಿ ಕಂಪನಿಗೆ ಮೆಕಾನಿಕ್ ಗೆ ಸಂಬಂಧಿಸಿದ ಸಮವಸ್ತ್ರವನ್ನು ಧರಿಸುತ್ತಿದ್ದರು. ನಂತರ ದೂರವಾಣಿ ಬಂದ ಬಳಿಕ ನಾನು ಚಿಗಟೇರಿ ಆಸ್ಪತ್ರೆಗೆ ಹೋಗಿ ನೋಡಿದ್ದು, ನಾನು ನೋಡಿದಾಗ ಫ್ರಾ.ಸಾ.1 ರವರಿಗೆ ಬೆನ್ನ ಮೇಲೆ ಹಾಗೂ ಎಡಕೈಯ ಮೇಲೆ ಗಾಯವಾಗಿ ಅದರಿಂದ ರಕ್ತ ಬರುತಿತ್ತು. ನಂತರ ಅಲ್ಲಿ ಪೋಲೀಸರು ಬಂದಿದ್ದು, ಅವರಿಗೆ ದೂರು ಬರೆಯಿಸಿ ಕೊಟ್ಟ ಬಳಿಕ ಫ್ರಾ.ಸಾ.1 ರವರನ್ನು ಎಸ್ ಎಸ್ ಆಸ್ಪತ್ರೆಗೆ ಹೆಚ್ಚಿನ ಚಿಕಿತ್ಸೆಗಾಗಿ ಕರೆದುಕೊಂಡು ಹೋಗಿರುತ್ತಾರೆ. ನಾನು ಕೂಡ ಫ್ರಾ.ಸಾ.1 ರವರ ಜೊತೆ ಎಸ್ ಎಸ್ ಆಸ್ಪತ್ರೆಗೆ ಹೋಗಿರುತ್ತೇನೆ.

ನಂತರ ನಾನು ಫ್ರಾ.ಸಾ.1 ರವರ ಬಳಿ ವಿಚಾರಿಸಲಾಗಿ ಫ್ರಾ.ಸಾ.1 ರವರು ತನಗೆ ತ್ರಿಶೂಲ್ ಟಾಕೀಸಿನ ಬಳಿ ಆರೋಪಿತರು ತನ್ನ ಮೇಲೆ ತಾನು ನನ್ನನ್ನು ಪ್ರೀತಿಸುತ್ತಿದ್ದ ಕಾರಣ ಹಲ್ಲೆ ಮಾಡಿರುತ್ತಾರೆ ಎಂದು ಹೇಳಿರುತ್ತಾರೆ. ಅಲ್ಲದೇ ಫ್ರಾ.ಸಾ.1 ರವರು ಆ ಸಮಯ ನನ್ನ ಬಳಿ ತನ್ನನ್ನು ಕೊಲೆ ಮಾಡಬೇಕು ಎಂಬ ಉದ್ದೇಶದಿಂದ ಹಲ್ಲೆ ಮಾಡಿರುತ್ತಾರೆ ಎಂದು ಹೇಳಿರುತ್ತಾರೆ. ನಾನು ನೋಡಿದ ಸಮಯದಲ್ಲಿ ಫ್ರಾ.ಸಾ.1 ರವರು ಧರಿಸಿದ್ದ ಬಟ್ಟೆಗೆ ರಕ್ತವು ತಾಗಿದ್ದು, ಸದರಿ ಬಟ್ಟೆಯನ್ನು ನಾನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಗೆ ಈಗ ಮು.ಮಾ.1 ಮತ್ತು ಮು.ಮಾ.3 ನ್ನು ತೋರಿಸಲಾಗಿದ್ದು, ಸಾಕ್ಷಿಯು ಮು.ಮಾ.1 ಮತ್ತು 3 ರ ಮೇಲೆ ರಕ್ತದ ಕಲೆ ಇರುವುದನ್ನು ಹಾಗೂ ಮು.ಮಾ.1 ರ ಹಿಂದುಗಡೆ ಚಾಕುವಿನಿಂದ ಚುಚ್ಚಿದ ಕಾರಣ ಶರ್ಟ್ ಹರಿದಿತ್ತು ಎಂದು ನುಡಿದಿರುತ್ತಾರೆ. ಈ ಕುರಿತು ಪೋಲೀಸರು ನನ್ನನ್ನು ವಿಚಾರಿಸಿದ್ದು, ನಾನು ಅವರಿಗೆ ಹೇಳಿಕೆ ನೀಡಿರುತ್ತೇನೆ.

**ಪಾಟೀಸವಾಲುಃ ಆರೋಪಿತರ ಪರ ವಕೀಲರಿಂದ.**

ನಾನು ಮತ್ತು 1 ನೇ ಆರೋಪಿ ಒಬ್ಬರಿಗೊಬ್ಬರು ಪ್ರೀತಿಸುತ್ತ ಮದುವೆಯಾಗಬೇಕು ಎಂದು ನಿರ್ಧರಿಸಿಕೊಂಡಿದ್ದೆವು ಎಂದರೆ ಸರಿ. ಸಾಕ್ಷಿಗೆ ಈಗ ಎರಡು ಪೋಟೋಗಳನ್ನು ತೋರಿಸಲಾಗಿದ್ದು, ಸಾಕ್ಷಿಯು ಅವೆರಡು ಪೋಟೋಗಳನ್ನು ನೋಡಿ ನಾನು ಮತ್ತು 1 ನೇ ಆರೋಪಿ ಪ್ರೀತಿಸುತ್ತಿದ್ದ ಸಮಯದಲ್ಲಿ ತೆಗೆದಂತಹ ಪೋಟೋಗಳು ಎಂದು ನುಡಿದಿರುತ್ತಾರೆ. ಸದರಿ ಎರಡು ಪೋಟೋಗಳನ್ನು ಸಾಕ್ಷಿಯು ಗುರುತಿಸಿದ ಕಾರಣ ಅವುಗಳನ್ನು ಕ್ರಮವಾಗಿ ನಿ.ಡಿ.2 ಮತ್ತು 3 ಎಂದು ಗುರುತಿಸಲಾಯಿತು. ನಾನು 1 ನೇ ಆರೋಪಿಯನ್ನು ಪ್ರೀತಿಸುತ್ತಿರುವಾಗ ಫ್ರಾ.ಸಾ.1 ರವರು ನನ್ನನ್ನು ಛೇಡಿಸುತ್ತಿದ್ದಾನೆ ಎಂದು ನಾನು 1 ನೇ ಆರೋಪಿಯ ಬಳಿ ಹೇಳಿಕೊಳ್ಳುತ್ತಿದ್ದೆ ಎಂದರೆ ಸರಿಯಲ್ಲ. ನಂತರ ನನ್ನ ಪಾಲಕರು ಹಾಗೂ 1 ನೇ ಆರೋಪಿಯು ನಾನು ಮತ್ತು ಫ್ರಾ.ಸಾ.1 ರವರು ಕೆಲಸ ಮಾಡುತ್ತಿದ್ದ ಕಂಪನಿಗೆ ಬಂದು ಫ್ರಾ.ಸಾ.1 ರವರ ಬಳಿ ವಿಚಾರಿಸಿರುತ್ತಾರೆ ಎಂದರೆ ಸರಿಯಲ್ಲ. ಆ ಸಮಯದಲ್ಲಿ ಫ್ರಾ.ಸಾ.1 ರವರು ನನ್ನ ಪಾಲಕರಿಗೂ ಹಾಗುಾ 1 ನೇ ಆರೋಪಿಗೂ ಧಮಕಿ ಹಾಕಿದ್ದ ಎಂದರೆ ಸರಿಯಲ್ಲ.

ನಾನು ಮುಖ್ಯ ವಿಚಾರಣೆಯಲ್ಲಿ ನುಡಿದಂತೆ 1 ನೇ ಆರೋಪಿಯು ಕುಡಿದು ಬಂದು ನಮ್ಮ ಕಂಪನಿಗೆ ಬಂದು ಫ್ರಾ.ಸಾ.1 ರವರಿಗೆ ಧಮಕಿ ಹಾಕುತ್ತಿದ್ದ ಎಂಬ ವಿಚಾರವನ್ನು ನಾನು ಪೋಲೀಸರಿಗೆ ಹೇಳಿಕೆ ನೀಡುವಾಗ ಹೇಳಿರುತ್ತೇನೆ. ನಂತರ 1 ನೇ ಆರೋಪಿಯು ಈ ರೀತಿಯಾಗಿ ಕುಡಿದು ಬಂದು ನನ್ನ ಜೊತೆ ಗಲಾಟೆ

ಮಾಡಿದಲ್ಲದೇ, ನನ್ನನ್ನು ಅನುಮಾನದಿಂದ ನೋಡುತ್ತಿದ್ದ ಕಾರಣ ಆತನನ್ನು ತೊರೆದು ಎರಡು ವರ್ಷಗಳ ಬಳಿಕ ಫ್ರಾ.ಸಾ.1 ರವರನ್ನು ಪ್ರೀತಿಸಲು ಆರಂಭಿಸಿದ್ದೆ ಎನ್ನುವ ವಿಚಾರವನ್ನು ಕೂಡ ನಾನು ಪೋಲೀಸರಿಗೆ ಹೇಳಿಕೆ ನೀಡುವಾಗ ಹೇಳಿರುತ್ತೇನೆ. ಅದೇ ರೀತಿ ದಿಃ 16-10-2020 ರಂದು ಮದ್ಯಾಹ್ನ 2-05 ನಿಮಿಷದ ಸಮಯದಲ್ಲಿ ಫ್ರಾ.ಸಾ.1 ನನಗೆ ದೂರವಾಣಿ ಮಾಡಿ ಆರೋಪಿತರು ಚಾಕು ಹಾಕಿದ ವಿಷಯವನ್ನು ತಿಳಿಸಿದ್ದು, ತದನಂತರ ನಾನು ಫ್ರಾ.ಸಾ.1 ರವರನ್ನು ನೋಡಲು ಚಿಗಟೇರಿ ಆಸ್ಪತ್ರೆಗೆ ಹೋಗಿದ್ದೇನೆ ಎನ್ನುವ ವಿಚಾರವನ್ನು ನಾನು ಪೋಲೀಸರಿಗೆ ಹೇಳಿಕೆ ನೀಡುವಾಗ ಹೇಳಿರುತ್ತೇನೆ. ನನಗೆ ಕನ್ನಡ ಓದಲು ಬರುತ್ತದೆ.

ಅದೇ ರೀತಿ ನಾನು ಪೋಲೀಸರ ಸಮಕ್ಷಮ ಹೇಳಿಕೆ ನೀಡುವಾಗ ಫ್ರಾ.ಸಾ.1 ರವರು ಕಂಪನಿಯವರು ನೀಡಿದ ಮೆಕಾನಿಕ್ ಗೆ ಸಂಬಂಧಿಸಿದ ಸಮವಸ್ತ್ರ ಧರಿಸುತ್ತಿದ್ದು, ನಾನು ಆಸ್ಪತ್ರೆಗೆ ಹೋಗಿ ನೋಡಿದಾಗ ಸದರಿ ಸಮವವಸ್ತ್ರಗಳಿಗೂ ಕೂಡ ರಕ್ತ ತಾಗಿತ್ತು ಎಂದು ಮುಖ್ಯ ವಿಚಾರಣೆಯಲ್ಲಿ ಹೇಳಿದ ವಿಚಾರವನ್ನು ಪೋಲೀಸರಿಗೆ ಹೇಳಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಆಸ್ಪತ್ರೆಗೆ ಹೋಗಿ ಫ್ರಾ.ಸಾ.1 ರವರನ್ನು ನೋಡಿದ ಬಳಿಕ ನಾನೇ ಸ್ವತಃ ಠಾಣೆಗೆ ಹೋಗಿ ದೂರನ್ನು ಸಲ್ಲಿಸುವ ಪ್ರಯತ್ನ ಮಾಡಿದ್ದು ಇರುವುದಿಲ್ಲ. ನಾನು ಮುಖ್ಯ ವಿಚಾರಣೆಯಲ್ಲಿ ನುಡಿದಂತೆ 1ನೇ ಆರೋಪಿಯು ಮೂರು ನಾಲ್ಕು ಬಾರಿ ಫ್ರಾ.ಸಾ.1 ರವರಿಗೆ ಧಮಕಿ ಹಾಕಿದ್ದಾನೆ ಎಂದು ನುಡಿದಿದ್ದು, ಆ ರೀತಿ ಧಮಕಿ ಹಾಕುವುದನ್ನು ನಾನು ಕಣ್ಣಾರೆ ನೋಡಿರುವುದಿಲ್ಲ. ಈ ರೀತಿಯಾಗಿ 1ನೇ ಆರೋಪಿಯು ಫ್ರಾ.ಸಾ.1 ರವರಿಗೆ ಧಮಕಿ ಹಾಕುತ್ತಿದ್ದ ಸಮಯದಲ್ಲಿ ನಾನಾಗಲಿ ಹಾಗೂ ಫ್ರಾ.ಸಾ.1 ರವರಾಗಲಿ ಆತನ ವಿರುದ್ಧ ದೂರು ಸಲ್ಲಿಸುವ ಪ್ರಯತ್ನ ಮಾಡಿರುವುದಿಲ್ಲ. ಆ ಸಮಯದಲ್ಲಿ ನಾನು 1ನೇ ಆರೋಪಿಯ ಪಾಲಕರಿಗಾಗಲಿ ಹಾಗೂ ನನ್ನ ಪಾಲಕರಿಗಾಗಲಿ ವಿಷಯ ತಿಳಿಸಿದ್ದೀರಾ ಎಂಬ ಪ್ರಶ್ನೆಗೆ ಸಾಕ್ಷಿಯು ನನ್ನ ಪಾಲಕರ ಬಳಿ ವಿಷಯ ತಿಳಿಸಿದ್ದು, ಆಗ 1ನೇ ಆರೋಪಿಯು ತಾನು ನನ್ನನ್ನು ಪ್ರೀತಿಸುತ್ತಿದ್ದ ವಿಚಾರವನ್ನು ಹೇಳಿರುತ್ತಾನೆ. ನಾನು ಈ ಹಂತದಲ್ಲಿ ಫ್ರಾ.ಸಾ.1 ರವರನ್ನು ಪ್ರೀತಿಸುತ್ತಿದ್ದ ಕಾರಣ ಫ್ರಾ.ಸಾ.1 ರವರ ಮಾತನ್ನು ಕೇಳಿಕೊಂಡು ಆರೋಪಿತರು ಫ್ರಾ.ಸಾ.1 ರವರನ್ನು ಕೊಲೆ ಮಾಡುವ ಉದ್ದೇಶದಿಂದ ಚಾಕುವಿನಿಂದ ತಿವಿದಿದ್ದಾರೆ ಎಂದು ಫ್ರಾ.ಸಾ.1 ರವರು ನನ್ನ ಬಳಿ ಹೇಳಿಕೊಂಡಿದ್ದಾರೆ ಎಂದು ನಾನು ಸುಳ್ಳು ಸಾಕ್ಷಿಯನ್ನು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು 1ನೇ ಆರೋಪಿಯನ್ನು ಪ್ರೀತಿಸಿ ನಂತರ ಆತನಿಗೆ ಮೋಸ ಮಾಡಿ ಈಗ ಫ್ರಾ.ಸಾ.1 ರವರ ಮಾತನ್ನು ಕೇಳಿಕೊಂಡು ಸುಳ್ಳು ಸಾಕ್ಷಿಯನ್ನು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಮು.ಮಾ.1 ಮತ್ತು 3ನ್ನು ಇದೇ ಪ್ರಥಮ ಬಾರಿಗೆ ನಾನು ನೋಡುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆಃ- ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ . ಹೇ. ಕೇ. ಸರಿಯಾಗಿದೆ.

PRAVEEN KUMAR RAGHAV NAIK

Digitally signed by PRAVEEN KUMAR RAGHAV NAIK
Date: 2025.08.14 11:15:24 +0530

2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ದಾವಣಗೆರೆ.